ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) 2004–2005ನೇ ಸಾಲಿನವರೆಗೆ ಹಿರೇಕೆರೂರು ತಾಲ್ಲೂಕಿನಲ್ಲಿ 61 ಅರ್ಜಿಗಳು 2001ನೇ ಸಾಲಿನಿಂದ ಬಾಕಿ ಉಳಿದಿವೆ.

ಆ) ಈ ಯೋಜನೆಗೆ ಹಣ ಬಿಡುಗಡೆಗಾಗಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲಾಗಿದೆ.

ಇ) ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆ ಆದನಂತರ ರಾಜ್ಯದ ಎಲ್ಲಾ ಜಿಲ್ಲೆಗಳ ಬೇಡಿಕೆ ಪರಿಗಣಿಸಿ, ಸ್ವೀಕೃತವಾಗುವ ಅನುದಾನದ ಪ್ರಮಾಣ ಗಮನದಲ್ಲಿಟ್ಟುಕೊಂಡು ಅನುದಾನ ಬಿಡುಗಡೆ ಮಾಡಲಾಗುವುದು.

787(521) ಶ್ರೀ ಪಾಟೀಲ್ ಬಿ.ಸಿ(ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಬಲೂರು ಗ್ರಾಮದ ಸೋಮೇಶ್ವರ ದೇವಾಲಯಕ್ಕೆ ಸರ್ಕಾರ ನೀಡಿದ ಅನುದಾನವೆಷ್ಟು;

ಆ) ದೇವಾಲಯದ ಕಟ್ಟಡ ಪ್ರಗತಿ ಕುಂಠಿತಗೊಳ್ಳಲು ಕಾರಣವೇನು :

ಇ) ಈ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಹಾವೇರಿ ಜಿಲ್ಲೆ ಅಬಲೂರು ಗ್ರಾಮದ ಶ್ರೀ ಸೋಮೇಶ್ವರ ದೇವಾಲಯವು ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆಗೆ ಒಳಪಟ್ಟ ಸಂಸ್ಥೆಯಾಗಿರುತ್ತದೆ. ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಸರ್ಕಾರದ ಆದೇಶ ಸಂ.ಸಂಕಇ/14/ಸ್ಮಪ್ರನಿ/2000(ಭಾ) ದಿ: 14/02/2001ರಲ್ಲಿ ರೂ. 11.65 ಲಕ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಂಜೂರಾಗಿದ್ದು, ಈ ಮೊಬಲಗನ್ನು ನಿರ್ದೇಶಕರು ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ, ಮೈಸೂರು ಇವರಿಗೆ ದಿ: 09/03/2001ರಂದು ಜಿಲ್ಲಾಧಿಕಾರಿಯವರಿಂದ ಕಳುಹಿಸಲಾಗಿದೆ.

ಆ) ಶ್ರೀ ಸೋಮೇಶ್ವರ ದೇವಾಲಯವು ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿರುವ ಬಗ್ಗೆ ಮುಜರಾಯಿ ಇಲಾಖಾವತಿಯಿಂದ ತಿಳಿಸಲು ಸಾಧ್ಯವಾಗುವುದಿಲ್ಲ.

ದೇವಾಲಯದ ಕಟ್ಟಡದ ಪ್ರಗತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿರುವ ವಸ್ತು ಮತ್ತು ಸಂಗ್ರಹಾಲಯ ಇಲಾಖೆಯಿಂದ ಪಡೆದುಕೊಳ್ಳಲಾಗುವುದು.

ಇ) ಮೇಲಿನ ಉತ್ತರ ಅನ್ವಯ ಪ್ರಶ್ನೆ ಉದ್ಭವಿಸುವುದಿಲ್ಲ.

788(989) ಶ್ರೀ ಪಾಟೀಲ್ ಬಿ.ಆರ್.(ಆಳಂದ್) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಮಜಾ ಮಧ್ಯಮ ನೀರಾವರಿ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರ ಬಾಕಿ ಇರುವ ಪರಿಹಾರ ಧನವೆಷ್ಟು;

ಆ) ಎಷ್ಟು ವರ್ಷಗಳಿಂದ ಈ ಹಣ ಪಾವತಿಸಲು ಬಾಕಿ ಇದೆ :

ಇ) ಬಾಕಿ ಇದ್ದ ಹಣವನ್ನು ಸಂದಾಯ ಮಾಡಲು ಎಷ್ಟು ಸಮಯ ಬೇಕಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಕೋರ್ಟ್ ಪ್ರಕರಣಗಳಲ್ಲಿ ರೂ. 3,64,11,498
ಐತೀರ್ಪಿಗಾಗಿ ರೂ. 85,64,226
ಒಟ್ಟು ರೂ. **4,49,75,724**

ಆ) 3–4 ವರ್ಷಗಳಿಂದ ಪಾವತಿಗೆ ಬಾಕಿ ಇದೆ.

ಇ) ನೀರಾವರಿ ಇಲಾಖೆಯಿಂದ ಹಣ ಪಡೆದು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

790(1464) ಶ್ರೀ ಪಾಟೀಲ್ ಡಿ.ಆರ್.(ಗದಗ್) : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ? :

ಅ) ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಪಟ್ಟಣಗಳು ಎಷ್ಟು :

ಆ) ಈ ಎಲ್ಲಾ ಪಟ್ಟಣಗಳಲ್ಲಿ ಪಟ್ಟಣವಾರು ವಾಯುಮಾಲಿನ್ಯದ ಪ್ರಮಾಣ ಎಷ್ಟು ;

ಇ) ಈ ವಾಯುಮಾಲಿನ್ಯ ತಡೆಗಟ್ಟಲು ಸರ್ಕಾರ ಈಗಾಗಲೇ ಕೈಗೊಂಡಿರುವ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳಾವುವು ;

ಈ) ಈಗಾಗಲೇ ಸಾಕಷ್ಟು ವಾಯುಮಾಲಿನ್ಯದಿಂದ ಬಳಲುತ್ತಿರುವ ಬೆಂಗಳೂರು ಹಾಗೂ ಇತರ ನಗರ ಪ್ರದೇಶಗಳಲ್ಲಿ ರಾಷ್ಟ್ರದ ರಾಜಧಾನಿಯಾಗಿರುವ ದಿಲ್ಲಿಯಲ್ಲಿ ಕೈಗೊಂಡಿರುವ ಕ್ರಮಗಳನ್ನು ಇಲ್ಲಿ ಕೈಗೊಳ್ಳಲು ಇರುವ ತೊಂದರೆಗಳೇನು; ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ :

ಉ) ಇದಕ್ಕಾಗಿ ರೂಪಿಸಲ್ಪಡುವ ಕಾರ್ಯಕ್ರಮಗಳಾವುವು ಹಾಗೂ ಅನುಷ್ಠಾನಕ್ಕೆ ಬೇಕಾಗುವ ಕಾಲಮಿತಿ ಎಷ್ಟು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) 28; (2001ರ ಜನಗಣತಿಯ ಪ್ರಕಾರ)

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದ 6 ಕೇಂದ್ರಗಳಲ್ಲಿ ಮತ್ತು ಮೈಸೂರು ನಗರದ 2 ಕೇಂದ್ರಗಳಲ್ಲಿ ಪರಿವೇಷ್ಟಕ ವಾಯುವಿನ ಗುಣಮಟ್ಟವನ್ನು ರಾಷ್ಟ್ರೀಯ ಪರಿವೇಷ್ಟಕ ವಾಯುವಿನಗುಣ ಮಾನಕಗಳ ಅನುಸಾರ ಮಾಪನ ಮಾಡುತ್ತಿದೆ. ಮಾಪನದ ವಿವರಗಳನ್ನು ಅನುಬಂಧ-I ಮತ್ತು II ರಲ್ಲಿ ಒದಗಿಸಲಾಗಿದೆ.

ಅಲ್ಲದೆ, ರಾಜ್ಯದ 12 ಪಟ್ಟಣಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿವೇಷ್ಟಕ ವಾಯುವಿನ ಯಾದೃಚ್ಛಿಕ ಮಾದರಿಗಳನ್ನು (Random Sample)ಮಾಪನ ಮಾಡುತ್ತಿದೆ. ವಿವರಗಳನ್ನು ಅನುಬಂಧ-III ರಲ್ಲಿ ಒದಗಿಸಲಾಗಿದೆ.

ಇ) ಪಟ್ಟಣಗಳಲ್ಲಿ ವಾಯು ಮಾಲಿನ್ಯವು ಪ್ರಮುಖವಾಗಿ ವಾಹನಗಳ ಹೊಗೆಯಿಂದ ಮತ್ತು ಕೈಗಾರಿಕಾ ಚಟುವಟಿಕೆಯಿಂದ ಉಂಟಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗಾರಿಕೆಗಳಲ್ಲಿ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸುವಂತೆ ನಿರ್ದೇಶನ ನೀಡುತ್ತಿದೆ ಮತ್ತು ಸಮ್ಮತಿ ಪತ್ರವನ್ನು ನೀಡುವಾಗ ಉದ್ದಿಮೆಯು ಮಾಲಿನ್ಯ ನಿಯಂತ್ರಣ